

ಮಹಾಂತೇಶ ನವಲಕಲ್
ಕಲೆ: ವಿಶ್ವನಾಥ್ ಎ.ಎಸ್.

# ಪ್ರೀತಿ ನದಿಯಾಗುವ ಕಾಲ

ಇಂದು ಮುಂಜಾನೆ ತಣ್ಣಗಿದ್ದರೂ ಏನೋ ಮನದಾಳದಲಿ ಬೆಂಕಿಯ ನರ್ತನ, ನಿನ್ನೆ ಬಿದ್ದ ಕುಂಭದ್ರೋಣ ಮಳೆಯಿಂದ ಈ ಇಳೆ ಎಂಬುದು ತಣ್ಣಗಾದರೂ ಮತ್ತೆ ವಾತಾವರಣ ಅಗ್ನಿಷ್ಟಿಕೆಯ ಕೆಂಡದಂತೆ ಭಾಸವಾಯಿತು.

ಇಂತಹ ಅನುಭವ ಅವನಿಗೆ ಪದೇ ಪದೇ ಆಗುತ್ತಿರುವುದು ಒಂದು ವಾರದಿಂದ. ಈ ಒಂದು ವಾರದಿಂದ ಮನದ ಕುದುರೆಗಳು ಲಂಗು ಲಗಾಮು ಇಲ್ಲದೆ ಗೊತ್ತು ಗುರಿಯಿಲ್ಲದೆ ಎತ್ತೆತ್ತಲೋ ಓಡಿದವು. ಆದರೆ, ಕಾಲ ಆ ತಲ್ಲಣಗೊಳಿಸಿದ ಕಾರಣಗಳಿಗೆ ಮುಖಾಮುಖಿಯಾಗುವಂತೆ ಇಂದು ಮಾಡಿಯೇಬಿಟ್ಟಿದ್ದ. ಸತ್ತ ಕನಸುಗಳು ಒಮ್ಮಿಂದೊಮ್ಮೆಲೆ ಗೋರಿಯಿಂದ ಎದ್ದು ಇವನ ಹೃನ್ಮನಗಳ ಮೇಲೆ ಬಯಲಾಟವಾಡಿದ್ದವು. ಅವಳು ಹಚ್ಚಿದ ದ್ರೋಹದ ದೀವಟಿಗೆಯ ದೀಪ ಜ್ವಾಲಾಮುಖಿಯಾಗಿ ತಿವಿತಿವಿದು ಹಿಂಸಿಸಿತ್ತು. ಎಂದೂ ಯಾರನ್ನೂ ನೆನಪಿಸಿಕೊಳ್ಳಬಾರದು, ಮಾತಾಡಿಸಬಾರದು, ಭೇಟಿಯಾಗಬಾರದು ಎಂದು ತೀರ್ಮಾನಿಸಿದ್ದವನೇ ಇಂದು ಅವಳನ್ನು ಭೇಟಿಯಾಗಲೆಂದೇ ಬಂದಿದ್ದ. ಅಂತಿಮವಾಗಿ ಗಲ್ಲಿಗೇರುವವನು ಮೌನವಾಗೇ ಕೊರಳು ಕೊಡುವಂತೆ ಈ ಹೋಟೆಲಿನ ಮುಂದೆ ಬಂದು ನಿಂತಿದ್ದ.

ಎದುರಿಗೆ ನಿಂತರೆ ಆ ಹೋಟೆಲ್ ಕಡಿದಾದ ಚೀನಾದ ಜಿಯಾಂಗ್ ಮೇರುಪರ್ವತದಂತೆ ಕಾಣುತ್ತಿತ್ತು. ಅದು ಕ್ಷಣಮಾತ್ರದಲಿ ತನ್ನ ಮೇಲೆ ಬಿದ್ದು ನೆಲದಲಿ ಅವಶೇಷ ಮಾಡುವುದೋ ಎಂಬ ಭಯ ಉಲ್ಬಣಿಸಿ ಕೊಂಚ ಹಿಂದೆ ಸರಿದ. ಯಾಕೆಂದರೆ ಈಗ ಭಯವೆಂಬುದು ತನ್ನ ಮೇಲೆ ಕೇಂದ್ರೀಕರಿಸಲ್ಪಟ್ಟ ನಿರಂತರ ಪ್ರಕ್ರಿಯೆ. ಒಳಗೆ ಹೋದ. ಅಲ್ಲಿ ಕುಳಿತಿದ್ದ ರಿಸೆಪ್ಷನಿಸ್ಟ್ ದೊಡ್ಡ ದೊಡ್ಡ ಮೀಸೆ ಬಿಟ್ಟುಕೊಂಡಿದ್ದ. ಅವನು ಇವನನ್ನು ಮೇಲೆ ಕೆಳಗೆ ನೋಡಿದಂತೆಲ್ಲ ಕ್ಷಣ ಕ್ಷಣಕ್ಕೂ ಮೀಸೆಗಳು ತಕಧಿಮಿತ ತಕಧಿಮಿತಾ ಎಂದು ಕುಣಿಯುತ್ತಿದ್ದವು. ಅವನು ಕಾಲಾಂತಕ ನಿರ್ವಾಹಕನಂತೆ ಮನದಾಳಲ್ಲಿ ಸುಳಿದು ಹೋದ. ಅವನು ಏನು ಎನ್ನುವಂತೆ ತನ್ನ ಭೀಭತ್ಸಕ ಕಣ್ಣುಗಳಿಂದಲೇ ಪ್ರಶ್ನಿಸಿದ. ರಿಸೆಪ್ಷನಿಸ್ಟನ್ನು

